subjects to take up the I and II year P.U.C. examination. This will be communicated to all the Schools and Colleges. We had to take this decision now because I came to know about this problem today only when some students came and represented to us.

I cannot say anything about the University examinations, because it is the University that has to take a decision about it, and the Government is not competent to do that.

Thank you, Sir.

BUDGET ESTMATES FOR 1979-80

General Discussion (Debate Continued)

† ಶ್ರೀ ಪಿ. ರಾಮದೇವ್ (ಪುಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಆಯವ್ಯಯದ ಮೇಲೆ ಮಾತನಾಡುವ ಮುನ್ನ ಕೇಳಿಕೊಳ್ಳುವುದೇನೆಂದರೆ, ನಾನು ವಿದ್ಯುಚ್ಛಕ್ತಿಯ ಬೇಡಿಕೆ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ; ಆ ಬಗ್ಗೆ ಮೊದಲೇ ಪ್ರಸ್ತಾಪಿಸಿದಾಗ ಒಂದು ಗಂಟೆಯ ನಂತರ ಹೇಳುವುದಾಗಿ ಅಪ್ಪಣೆ ಕೊಡಿಸಿದ್ದಿರಿ.

ಅಧ್ಯಕ್ಷರು.—ತಮ್ಮನ್ನು ಕರೆದದ್ದು ಲಿಸ್ಟ್‌ನಲ್ಲಿ ತಮ್ಮ ಹೆಸರು ಇದೆ, ಮಾತನಾಡಿ ಎಂದು.

ಶ್ರೀ ಪಿ. ರಾಮದೇವ್.—ನಾನು ಖಿಏನೇ ನಿಯಮದ ಕಳಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ ಅದು ಇವತ್ತೇ ಚರ್ಚೆಯಾಗಬೇಕು.

ಅಧ್ಯಕ್ಷರು.—ಅದನ್ನೆಲ್ಲ ಪರೀಕ್ಷೆ ಮಾಡಿ ಯಾವ ವಿಷಯವನ್ನು ಕೊಟ್ಟಿದ್ದೀರಿ ಅದನ್ನು ಯಾವ ರೀತಿ ಮಾಡಬಹುದು ಎಂಬುದನ್ನೆಲ್ಲ ನೋಡಬೇಕು. ಆದ್ದರಿಂದ ಅದು ಪರೀಕ್ಷೆಯ ನಂತರ ನಾಳೆ ಬರಬಹುದು. ಈಗ ಆಯವ್ಯಯದ ಮೇಲೆ ಮಾತನಾಡಿ.

ಶ್ರೀ ಪಿ. ರಾಮದೇವ್.—ಸ್ವಾಮಿ, ತಮಗೆ ಮಕ್ಕಳಿದ್ದಾರೋ ಇಲ್ಲವೋ ಗೊತ್ತಿಲ್ಲ. ಈಗ ಪರೀಕ್ಷೆ ಕಾಲವಾದ್ದರಿಂದ ಮಕ್ಕಳಿಗೆ ಓದಿಕೊಳ್ಳುವುದಕ್ಕೆ ಬಹಳ ಅನಾನುಕೂಲವಾಗಿದೆ. ನಾಳೆ ತೆಗೆದು ಕೊಳ್ಳುತ್ತೇನೆಂದು ಹೇಳಿದ್ದೀರಿ; ತೆಗೆದುಕೊಳ್ಳಿ.

ಅಧ್ಯಕ್ಷರೇ,—೧೯೭೯-೮೦ನೇ ಸಾಲಿನ ಆಯವ್ಯಯ ಪತ್ರವನ್ನು ಈ ಸಭೆಯ ಮುಂದೆ ಮಂಡಿಸಿರತಕ್ಕದ್ದರಲ್ಲಿ ಮೊದಲನೆಯದಾಗಿ ಬಹಳ ನಿದಾನವಾಗಿ ಮಂಡಿಸಿರತಕ್ಕದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಸರ್ಕಾರಕ್ಕೆ ಬೇಕಾದಷ್ಟು ಅವಕಾಶಗಳಿದ್ದರೂ ಕೂಡ ಆವರ ಒಂದು ರಾಜಕೀಯ ಚಟುವಟಿಕೆಗಳಿಗಾಗಿ ಈ ಅಧಿವೇಶನವನ್ನು ನಿದಾನವಾಗಿ ಕರೆದು ಯಾವುದನ್ನು ಪೂರ್ತಿಯಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೆ ಓಟ್ ಅನ್ ಅಕೌಂಟ್ ತೆಗೆದುಕೊಂಡು ಮಾಡಿರತಕ್ಕದ್ದು ಸರಿಯಲ್ಲವೆಂಬುದು ನನ್ನ ಭಾವನೆ. ಈ ಬಗ್ಗೆ ಪೊಟ್ಟಿಮೊದಲನೆಯದಾಗಿ ಹೇಳುವುದೇನೆಂದರೆ ಆಯವ್ಯಯ ಪತ್ರವನ್ನು ಕನ್ನಡದಲ್ಲಿ ಮಂಡಿಸಿದ್ದರೆ ಬಹಳ ಚೆನ್ನಾಗಿತ್ತು; ಆ ರೀತಿ ಮಾಡಬೇಕಿತ್ತು. ಇತ್ತೀಚೆಗೆ ಮಾನ್ಯ ಮುಖ್ಯ ಮಂತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ಕನ್ನಡವನ್ನು ರಾಜ್ಯ ಸರ್ಕಾರದ ಎಲ್ಲ ಹಂತಗಳಲ್ಲಿಯೂ ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಆದರೆ ಮಾನ್ಯ ಯಾಹ್ಯಾರವರು ಆಯವ್ಯಯ ಪತ್ರವನ್ನು ಕನ್ನಡದಲ್ಲೇ ಓದದೇ ಕನ್ನಡಕ್ಕೆ ಅಪಚಾರ ಮಾಡಿದ್ದಾರೆ. ಕನ್ನಡದಲ್ಲೇ ಅವರು ಆಯವ್ಯಯ ಪತ್ರವನ್ನು ಓದಬೇಕಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಕನ್ನಡ ಬರದೇ ಇರತಕ್ಕಂಥ ಮಂತ್ರಿಗಳು ಇದ್ದಾರೆ ಎಂದರೆ ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಮಾನ್ಯ ಯಹ್ಯಾರವರಿಗೆ ಕನ್ನಡ ಚೆನ್ನಾಗಿ ಬರುತ್ತದೆ. ಆದರ ಜೊತೆಯಲ್ಲಿ ಎಲ್ಲವನ್ನೂ ಕನ್ನಡೀಕರಣ ಮಾಡುತ್ತೇವೆಂದು ಘೋಷಣೆಗಳನ್ನು ಮಾಡುತ್ತಿರುತ್ತಾರೆ. ಎಲ್ಲಿದೆ ಕನ್ನಡೀಕರಣ ಎಂದು ಕೇಳುತ್ತೆನೆ ? ಆದ್ದರಿಂದ ಮುಂದಿನ ಸಾರಿ ಆಯವ್ಯಯ ಪತ್ರವನ್ನು ಓದತಕ್ಕಂಥ ಸಂದರ್ಭದಲ್ಲಿ ಮಾನ್ಯ ಯಾಹ್ಯಾರವರು ತಮ್ಮ ಭಾಷಣವನ್ನು ಕನ್ನಡದಲ್ಲೇ ಪೂರ್ತಿಯಾಗಿ ಓದಬೇಕು ಎಂದು ಹೇಳುತ್ತೇನೆ. ಕರ್ನಾಟಕ ರಾಜ್ಯದ ಗೌರ್ನರ್ ಆದಂಥ ಶ್ರೀ ಗೋವಿಂದನಾರಾಯಣ್‌ರವರು ಈ ಉಭಯ ಸದನಗಳನ್ನು

ಉದ್ದೇಶಿಸಿ ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಅವರು ತಮ್ಮ ಭಾಷಣವನ್ನು ಕನ್ನಡದಲ್ಲಿ ಓದ ಬೇಕಾದರೆ ಮಾನ್ಯ ಅರ್ಥಮಂತ್ರಿಯವರು ಈ ರೀತಿ ಮಾಡಿರುವುದು ಸರಿಯಲ್ಲವೆಂದು ಹೇಳಬೇಕಾಗಿದೆ. ಸ್ವಾಮಿ, ಮಾನ್ಯ ಅರ್ಥಮಂತ್ರಿಯವರಿಗೆ ಹೊಸ ತೆರಿಗೆಯನ್ನು ಹಾಕದೇ ಆಯವ್ಯಯವನ್ನು ಇಲ್ಲಿ ಪಂಡಿಸ ತಕ್ಕಂಥ ಅವಕಾಶ ಇತ್ತು. ಇದರಲ್ಲಿ ಹಾಕಿರತಕ್ಕಂಥ ಹೊಸ ತೆರಿಗೆಗಳು ಬೇಕಾಗಿರಲಿಲ್ಲ ಎಂದು ನನಗನ್ನಿಸುತ್ತಿದೆ. ಈ ಸೇಲ್ಸ್‌ಟ್ಯಾಕ್ಸ್ ಮೇಲೆ ಸರ್‌ಚಾರ್ಜ್ ಹಾಕಿರತಕ್ಕಂಥಾದ್ದನ್ನು ಮತ್ತು ಇನ್ನೂ ೨ ಪ್ರಮುಖ ಬಾಬುಗಳ ಮೇಲೆ ತೆರಿಗೆಯನ್ನು ಹಾಕಿರತಕ್ಕಂಥಾದ್ದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ತಮ್ಮ ಡಿಪಾರ್ಟ್‌ಮೆಂಟಿನ ಕೈಪಿಡಿಯನ್ನು ನೋಡಿದಾಗ ತೆರಿಗೆ ಬಾಕಿಯಿಂದ ಎಷ್ಟು ಹಣ ಬಾಕಿ ಬರತಕ್ಕಂಥಾದ್ದು ಇದೆ ಎಂಬುದು ಗೊತ್ತಾಗುತ್ತಿದೆ. ಈ ಬಾಕಿ ಬರತಕ್ಕಂಥ ತೆರಿಗೆ ಹಣವನ್ನು ವಸೂಲು ಮಾಡಿದ್ದರೆ ಹೊಸದಾಗಿ ತೆರಿಗೆಯನ್ನು ಹಾಕತಕ್ಕಂಥ ಪ್ರಮೇಯ ಬರುತ್ತಾ ಇರಲಿಲ್ಲ, ಅದರ ಅವಶ್ಯಕತೆಯೂ ಇರಲಿಲ್ಲ. ಈ ಹೊಸ ತೆರಿಗೆ ಹಾಕಿರತಕ್ಕಂಥಾದ್ದು ಸರಿ ಎಂದು ಅವರೇ ಹೇಳಿದ್ದಾರೆ. ಅದರ ಜೊತೆಗೆ ಈ ಆಕ್ಟ್ರಾಯನ್ನು ತೆಗೆದಿದ್ದಾರೆ. ನಾವು ಮೊದಲಿನಿಂದಲೂ ಈ ಆಕ್ಟ್ರಾಯ್ ತೆಗೆಯಬೇಕೆಂದು ಹೋರಾಟ ಮಾಡಿದ್ದೇವೆ. ಇವತ್ತು ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ಸ್ ನವರು ಈ ಆಕ್ಟ್ರಾಯನ್ನು ತೆಗೆದಿರುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಫೋಟೋವನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಹಾಡಿ ಹೊಗಳಿದ್ದಾರೆ. ನಾವು ಆಕ್ಟ್ರಾಯ್ ತೆಗೆಯಬೇಕು ಎಂದು ಹೇಳಿ ಜೈಲವಳಿ ಮಾಡಿ ಜೈಲ್ಲಿಗೆ ಹೋಗಿ ಸಫರ್ ಮಾಡಿರತಕ್ಕಂಥ ನಮ್ಮ ಬಗ್ಗೆ ಅವರು ಒಂದು ಮಾತನ್ನು ಆಡಿಲ್ಲ. ಆದರೂ ಪರವಾಗಿಲ್ಲ ಇಷ್ಟು ತರಾತುರಿಯಿಂದ ಇದನ್ನು ಖತಕ್ಕೆ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ಆಕ್ಟ್ರಾಯ್ ತೆಗೆಯುವ ಬಗ್ಗೆ ಕೇಂದ್ರ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಅವರು ಈ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ. ಅವರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ ಕರ್ನಾಟಕ ಸರ್ಕಾರದವರು ಇಷ್ಟು ತರಾತುರಿಯಿಂದ ಈ ಆಕ್ಟ್ರಾಯನ್ನು ತೆಗೆದಿರಬೇಕಾದರೆ ಇದಕ್ಕೆ ಹಲವಾರು ಬೇರೆ ಕಾರಣಗಳು ಇರಬಹುದು ಎಂದು ನನಗನ್ನಿಸುತ್ತಿದೆ. ನಮ್ಮ ಸರ್ಕಾರಕ್ಕಂತೂ ಸಧ್ಯಕ್ಕೆ ಕೇಂದ್ರ ಸರ್ಕಾರದಿಂದ ದುಡ್ಡು ಬರುತ್ತದೆ ಎಂದು ಅನ್ನಿಸುವುದಿಲ್ಲ. ಏಕೆಂದರೆ ಅವರು ಇನ್ನೂ ಈ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್‌ಗೆ ೧೨ ಕೋಟಿ ರೂಪಾಯಿಗಳ ಆಕ್ಟ್ರಾಯ್ ಬರುತ್ತಿತ್ತು. ಈ ಆಕ್ಟ್ರಾಯ್ ಏಪ್ರಿಲ್ ೧ನೇ ತಾರೀಖಿಗೆ ನಿಂತು ಹೋಯಿತು. ಕಾರ್ಪೊರೇಷನ್‌ನ ಎಷ್ಟಾಬ್ಲಿಷ್‌ಮೆಂಟ್ ಎಕ್ಸ್‌ಪೆಂಡಿಚರ್ ೬–೭ ಕೋಟಿ ರೂಪಾಯಿಗಳಷ್ಟು ಇದೆ. ಉಳಿದ ಹಣದಿಂದ ಯಾವರೀತಿಯ ಕೆಲಸ ಮಾಡುವುದಕ್ಕೂ ಸಾಧ್ಯವಿಲ್ಲ ಎಂದು ನನಗೆ ಅನ್ನಿಸುತ್ತಿದೆ. ಪ್ರಾಯಶಃ ನಗರ ಕಾರ್ಪೊರೇಷನ್ ಚುನಾವಣೆ ಆಗುತ್ತದೆ, ಆಗ ಜನತಾಪಕ್ಷ ಕಾಂಗ್ರೆಸ್‌ಗೆ ವಿರುದ್ಧವಾಗಿ ನಿಂತು ಗೆದ್ದು ಬರುತ್ತದೆ: ಆಗ ತುಂಬಾ ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಸುಂಕವನ್ನು ತೆಗೆದಿದ್ದಾರೆ ಎಂದು ಹೇಳುತ್ತೇನೆ. ಇದನ್ನು ಮರ್‌ಚೆಂಟ್ಸ್‌ಗೆ ಆಗತಕ್ಕಂಥ ಕಿರುಕುಳದ ಕಾರಣ ಒಂದೇ ಅಲ್ಲಿ ತಪ್ಪಿಸುವುದಕ್ಕೆ ಮಾಡಿಲ್ಲ ಎಂದು ನನಗೆ ಅನ್ನಿಸುತ್ತಿದೆ.

ಈ ರಾಜ್ಯದ ಆಡಳಿತದ ಬಗ್ಗೆ ಮಾನ್ಯ ಅರ್ಥ ಮಂತ್ರಿಯವರು ಒಂದು ಮಾತನ್ನು ಹೇಳಿದ್ದಾರೆ. ''ರಾಜ್ಯದ ಆಡಳಿತವು ಎಂದಿನಂತೆ ಉನ್ನತ ದಕ್ಷತಾ ಮಟ್ಟದಲ್ಲಿ ಮುಂದುವರಿಯುತ್ತಿದೆ'' ಎಂದು ಹೇಳಿದ್ದಾರೆ. ಇದು ಯಾರೂ ಒಪ್ಪತಕ್ಕಂಥ ಮಾತಲ್ಲ ಎಂದು ನನಗನ್ನಿಸುತ್ತಿದೆ. ಸಾರ್ವಜನಿಕವಾಗಿ ಒಬ್ಬ ಸಾಮಾನ್ಯ ಮನುಷ್ಯನನ್ನು ಕೇಳಿದರೂ ಸಹ ಈ ಆಡಳಿತದಲ್ಲಿ ದಕ್ಷತೆಯಿಲ್ಲ ಎಂದು ಹೇಳುತ್ತಿನೆ ಹಲವಾರು ವರ್ಷಗಳ ಹಿಂದೆ ಮಾನ್ಯ ವಿಶ್ವೇಶ್ವರಯ್ಯನವರ ಕಾಲದಲ್ಲಿ, ದಿವಾನರ ಕಾಲದಲ್ಲಿ ಇದ್ದಂಥ ದಕ್ಷತೆ ಈಗ ಇಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ ಇದೇ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಈಗಿರತಕ್ಕಂಥ ಸರ್ಕಾರದ ಆಡಳಿತ ಕೇವಲ ಐ.ಎ.ಎಸ್ ಧಿಕಾರಿಗಳ ಕೈವಶವಾಗಿದೆ ಎಂದು ಕೆಲವರು ಹೇಳಿದ್ದಾರೆ. ಇನ್ನು ಕೆಲವರು ಸರ್ಕಾರದ ಆಡಳಿತ ಮಂತ್ರಿಗಳು ಮತ್ತು ಕೆಲವು ಅಧಿಕಾರಿಗಳ ಕೈವಶವಾಗಿದೆ ಎಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳು ಮತ್ತು ಐ.ಎ.ಎಸ್. ಅಧಿಕಾರಿಗಳು ಇವತ್ತಿನದಿವಸ ಅಧಿಕಾರವನ್ನು ನಡೆಸಲಿತ್ತಾ ಇಲ್ಲ. ಇನ್ನು ಬೇರೆ ಯಾರು ಅಧಿಕಾರ ನಡೆಸುತ್ತಿದ್ದಾರೆ ಎಂದರೆ ಹಲವಾರು ಮಂತ್ರಿಗಳ ಪತ್ನಿಯರು, ಉಪಪತ್ನಿಯರು ಯಾರಿದ್ದಾರೆ ಅವರೇ ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದಾರೆ ಹೊರತಾಗಿ ಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ ಸರ್ಕಾರವನ್ನು ನಡೆಸುತ್ತಾ ಇಲ್ಲ. ನಾನು ಬೇಕಾದರೆ ಇದಕ್ಕೆ ಉದಾಹರಣೆಯನ್ನು ಕೊಡಬಲ್ಲೆ. ಹಲವಾರು ಮಾನ್ಯ ಮಂತ್ರಿಗಳಿಗೆ ಉಪಪತ್ನಿಯರೂ ಇದ್ದಾರೆ ಇದು ಎಲ್ಲರಿಗೂ ಗೊತ್ತಿದೆ. ಇವತ್ತಿನ ದಿವಸ ಸರ್ಕಾರದ ಮಟ್ಟದಲ್ಲಿ ಯಾವುದಾದರು ಕೆಲಸ ಆಗಬೇಕಾಗಿ

ದ್ದರೆ ನಮ್ಮಂತಹ ಸದಸ್ಯರುಗಳಿಂದ ಆಗುವುದಿಲ್ಲ: ಯಾರು ಕೆಲವರು ಪಿಜೆಂಟರುಗಳು ಇರುತ್ತಾರೆ ಅವರು ಈ ಮಾನ್ಯಮಂತ್ರಿಗಳ ಪತ್ನಿಯರು, ಉಪಪತ್ನಿಯರನ್ನು ಹಿಡಿದುಕೊಂಡು ಹೋಗುತ್ತಾರೆ: ಅವರಿಂದ ಅನೇಕ ಕೆಲಸಗಳು ಆಗುತ್ತಿವೆ. ಇದನ್ನು ದಕ್ಷತೆ ಎಂದು ಹೇಳುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ. ವಿಧಾನಸೌಧದ ಸುತ್ತ ಮುತ್ತಲೂ ಈ ಪಿಜೆಂಟರ ಕೆಲಸ ನಡೆಯುತ್ತಿದೆ ಎಂದು ಹೇಳಬಹುದು. ಇಂತಹದು ಬೇಕಾದಷ್ಟು ನಡೆಯುತ್ತಿವೆ. ಆದ್ದರಿಂದ ತಾವು ಏನು ಇವರಲ್ಲಿ ಆಡಳಿತದ ದಕ್ಷತೆಯ ಬಗೆ ಹೇಳಿದ್ದೀರಿ ಅದು ಸರಿಯಲ್ಲ ಎಂದು ನಾನು ಹೇಳುತ್ತಿದ್ದೇನೆ.

ಇನ್ನು ನೇಮಕಾತಿ ವಿಷಯದಲ್ಲಿ ಹೇಳಬೇಕಾದರೆ ಸರ್ಕಾರಿ ಸೇವೆಯ ಸಂಬಂಧದಲ್ಲಿ ನೇರ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಪರಿಜನಗಿರಿಜನ ಮತ್ತು ಹಿಂದುಳಿದ ವರ್ಗಗಳಿಗೆ ೩೫ ವರ್ಷಕ್ಕೆ, ಹಿಂದುಳಿದ ಜಾತಿಯವರಿಗೆ ೩೩ ವರ್ಷಕ್ಕೆ ಹಾಗೂ ಇತರರಿಗೆ ೩೦ ವರ್ಷಕ್ಕೆ ಪೆಚ್ಚಿಸಲಾಗಿದೆ ಎಂದು ತಾವು ಇದರಲ್ಲಿ ಹೇಳಿದ್ದೀರಿ. ಇದರಿಂದಾಗಿ ಇವತ್ತು ಯಾರಿಗೂ ಕೆಲಸ ಸುಲಭವಾಗಿ ಸಿಕ್ಕುತ್ತಾ ಇಲ್ಲ. ಎಂಪ್ಲಾಯ್‌ಮೆಂಟ್ ಆಫೀಸ್‌ನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸಿದರೆ ೧೦ ವರ್ಷಕ್ಕಿಂತ ಕಡಿಮೆ ಯಾರಿಗೂ ಕೆಲಸ ಸಿಕ್ಕುತ್ತಾ ಇಲ್ಲ. ಆದ್ದರಿಂದ ತಾವು ಏನು ಈಗ ವಯೋಮಿತಿಯನ್ನು ೩೫ಕ್ಕೆ ಮತ್ತು ೩೦ಕ್ಕೆ ಪೆಚ್ಚಿಸಿದ್ದೀರಿ ಅದನ್ನು ಕನಿಷ್ಟಪಕ್ಷ ೩೫ ವರ್ಷಕ್ಕೆ ಪೆಚ್ಚಿಸುವುದು ಒಳ್ಳೆಯದು ಎಂದು ಹೇಳುತ್ತೇನೆ. ಅದೇ ರೀತಿಯಾಗಿ ರಿಟೈರ್‌ಮೆಂಟ್ ಏಜ್ ಬಗ್ಗೆ ತಾವು ಏನನ್ನೂ ಹೇಳಲ್ಲ. ೫೫ನೇ ವರ್ಷಕ್ಕೆ ರಿಕ್ರೂಟ್‌ಮೆಂಟ್ ಮಾಡಿ ೫೫ನೇ ವರ್ಷಕ್ಕೆ ರಿಟೈರ್ ಮಾಡುತ್ತೇವೆ ಎಂದರೆ ಅದು ಸಾಮಾಜಿಕ ನ್ಯಾಯವಾಗುವುದಿಲ್ಲ ತಾವು ಯಾವರೀತಿ ರಿಕ್ರೂಟ್‌ಮೆಂಟ್ ಏಜನ್ನು ಜಾಸ್ತಿ ಮಾಡಿತ್ತೀರೋ ಹಾಗೆಯೇ ರಿಟೈರ್‌ಮೆಂಟ್ ಏಜನ್ನು ಜಾಸ್ತಿ ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ.

ಇನ್ನು ತಾವು ಹಾಸ್ಪಿಟಲ್‌ಗಳ ಬಗ್ಗೆ ಕೊಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಇವತ್ತು ವಿಕ್ಟೋರಿಯಾ ಹಾಸ್ಪಿಟಲ್, ಕೆ. ಸಿ. ಜನರಲ್ ಹಾಸ್ಪಿಟಲ್, ಬೋರಿಂಗ್ ಹಾಸ್ಪಿಟಲ್ ಗಳಿಗೆ ಭೇಟಿ ಕೊಟ್ಟು ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ನೋಡಿಕೊಂಡು ಬರಬೇಕು ಎಂದು ಹೇಳುತ್ತೇನೆ. ಈ ಹಾಸ್ಪಿಟಲ್‌ಗಾಗಿ ತಾವು ಏನು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಆ ಹಣ ಯಾರಿಗೆ ಮುಟ್ಟಬೇಕೋ ಅವರಿಗೆ ಮುಟ್ಟುತ್ತಾ ಇಲ್ಲ. ಅಲ್ಲಿ ಕಾಮನ್ ಡ್ರಗ್ಸ್ ಸಪ್ಲೈ ಸಿಕ್ಕುತ್ತಾ ಇಲ್ಲ.

SRI K. BHASKER NAIDU.—I raise a point of order. It is Six 'O' clock now I would like to know whether the sitting would be extended.

SRI K. L. MARISWAMY JOINING THE CONGRESS I PARTY—ANNOUNCEMENT

MR. SPEAKER.—I have received a letter dated 6th April 1979 from Sri K. L. Mariswamy, MLA stating that he has joined the Congress-I Legislature Party. I have received a letter from Sri D. Jayadevaraj Urs Secretary, Legislature Congress-I dated 6th April 1979 stating that Sri. K. L. Mariswamy has been admitted to Congress-I Party. Seating arrangement will be made accordingly.

The House stands adjourned to meet tomorrow at 9 A.M.

The House adjourned at Six of the Clock to meet again at Nine of the Clock on Saturday the 7th April 1979.